ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.**

ಸಂಖ್ಯೆ:ವೃ.ಶಿ.ವಿಭಾಗ:ಜಿ.ಹ.ವ.ಪ್ರ:01:2012-13 ದಿನಾಂಕ:26ನೇ ನವೆಂಬರ್ 2012

**: ಜ್ಞಾ ಪ ನ :**

**ವಿಷಯ:** 2012-13ನೇ ಸಾಲಿನಲ್ಲಿ ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದ ವಸ್ತು ಪ್ರದರ್ಶನವನ್ನು ಜಿಲ್ಲಾ ಹಂತದಲ್ಲಿ ನಡೆಸಿ ವರದಿ ಸಲ್ಲಿಸುವ ಬಗ್ಗೆ.

**ಉಲ್ಲೇಖ:** ನಿರ್ದೇಶಕರು [ಪ್ರೌಢ ಶಿಕ್ಷಣ], ಇವರ ಪತ್ರ ಸಂಖ್ಯೆ::ವೃ.ಶಿ:ವಿಭಾಗ: ಜಿ.ಹ.ವ.ಪ್ರ:01:2011-12, ದಿನಾಂಕ:18.01.2012.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖದನ್ವಯ 2011-12ನೇ ಸಾಲಿನಲ್ಲಿ ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ಹಂತದಲ್ಲಿ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳ ಮಕ್ಕಳಿಗಾಗಿ ವಸ್ತು ಪ್ರದರ್ಶನವನ್ನು ಏರ್ಪಡಿಸಿ ಯಶಸ್ವಿಗೊಳಿಸಿದೆ.

ಅದೇ ರೀತಿ 2012-13ನೇ ಸಾಲಿನಲ್ಲಿ ವೃತ್ತಿ ಶಿಕ್ಷಣ ಪಠ್ಯ ಕ್ರಮದಂತೆ ವಸ್ತು ಪ್ರದರ್ಶನಕ್ಕಾಗಿ ವಸ್ತುಗಳನ್ನು ಸಿದ್ಧಪಡಿಸಿಕೊಳ್ಳುವುದು. ಕಚ್ಚಾವಸ್ತುಗಳ ಖರೀದಿಗಾಗಿ ಶಾಲಾ ಕ್ರಾಫ್ಟ್ ಹಣದಲ್ಲಿ ಈ ಖರ್ಚುಭರಿಸುವುದು. [ಚಾಲ್ತಿ ಅಥವಾ ಸಂಚಿತ ನಿಧಿ ಯಾವುದು ಅಗತ್ಯವೆನಿಸುವುದೋ ಆ ಹಣ] ಸದರಿ ವೆಚ್ಚವನ್ನು ರೂ. 1000/- ಗಳಿಗೆ ಮೀರದಂತೆ ಭರಿಸುವುದು. ವಸ್ತುಪ್ರದರ್ಶನದಲ್ಲಿ ಭಾಗವಹಿಸಲು ಬರುವ ಶಾಲೆಯ ಇಬ್ಬರು ಮಕ್ಕಳು ಮತ್ತು ಒಬ್ಬರು ವೃತ್ತಿ ಶಿಕ್ಷಕರಿಗೆ ತಗಲುವ ಕನಿಷ್ಠ ಬಸ್ ಪ್ರಯಾಣದ ದರವನ್ನು ಸಹ ಚಾಲ್ತಿ ಅಥವಾ ಸಂಚಿತ ನಿಧಿಯಿಂದ ನೀಡಬಹುದು. ಸದರಿ ವೆಚ್ಚ ರೂ. 1000/-ಗಳಲ್ಲಿ ಶಾಲಾ ಹಂತದ ವಸ್ತುಪ್ರದರ್ಶನಕ್ಕಾಗಿ ರೂ. 250/- ಭರಿಸುವುದು. ಹಾಗೂ ತಾಲ್ಲೂಕು ಹಂತದ ವಸ್ತುಪ್ರದರ್ಶನಕ್ಕೆ ರೂ. 250/- ಗಳನ್ನು ಭರಿಸುವುದು. ಉಳಿದ ರೂ. 500/- ಗಳನ್ನು ಜಿಲ್ಲಾ ಮಟ್ಟದ ವಸ್ತುಪ್ರದರ್ಶನ ವೆಚ್ಚಕ್ಕಾಗಿ ಸಲ್ಲಿಸುವುದು.

**ವಸ್ತು ಪ್ರದರ್ಶನದ ಬಗ್ಗೆ ಈ ಕೆಳಕಂಡ ಮಾರ್ಗದರ್ಶನವನ್ನು ಅನುಸರಿಸಲು ತಿಳಿಸಿದೆ.**

*01.* ವಸ್ತು ಪ್ರದರ್ಶನದಲ್ಲಿ ಭಾಗವಹಿಸುವ ಎಲ್ಲಾ ವೃತ್ತಿ ಶಿಕ್ಷಕರು [ಚಿತ್ರಕಲೆ, ಸಂಗೀತ ಶಿಕ್ಷಕರನ್ನು ಹೊರತುಪಡಿಸಿ] ತಮ್ಮ ತಮ್ಮ ವಿಷಯದಲ್ಲಿ ಪಠ್ಯಕ್ರಮದಂತೆ ತಯಾರಿಸಿದ ಗುಣಮಟ್ಟದ ವಸ್ತುಗಳನ್ನು ಪ್ರದರ್ಶನದಲ್ಲಿಡಲು ಸಂಪೂರ್ಣ ತಯಾರಿಯನ್ನು ಮಾಡಿಕೊಳ್ಳುವುದು.

*02.* ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಬಳಸಿ ಗುಣಮಟ್ಟದ ವಸ್ತುಗಳನ್ನು ತಯಾರಿಸುವುದು. [ಕೌಶಲ್ಯಗಳನ್ನು ಒಳಗೊಂಡಿರಬೇಕು]

*03.* ಪ್ರದರ್ಶನದಲ್ಲಿಡುವ ವಸ್ತುಗಳ ಗಾತ್ರ ದೊಡ್ಡದಾಗಿರಬೇಕು [ಚಿಕ್ಕ ಸ್ಯಾಂಪಲ್‌ಗಳಿಗೆ ಅವಕಾಶವಿಲ್ಲ]

*04.* ಗ್ರಾಮೀಣ ಕುಶಲ ಕೈಗಾರಿಕೆಗೆ ಸಂಬಂಧಿಸಿದಂತೆ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳ ಸಹಕಾರದಿಂದ ಉತ್ತಮ ಗುಣಮಟ್ಟದ ವಿಶೇಷ ವಸ್ತುಗಳನ್ನು ತಯಾರಿಸಿಕೊಳ್ಳುವುದು. [ಸಾಮಾಜಿಕ ಉಪಯುಕ್ತ ಉತ್ಪಾದನಾ ಕಾರ್ಯ ಚಟುವಟಿಕೆಗಳು]

*05.* ಪಠ್ಯ ಪೂರಕವಾಗಿ, ವೃತ್ತಿ ಶಿಕ್ಷಣದ ಚಟುವಟಿಕೆಗಳನ್ನು ಸಮನ್ವಯಗೊಳಿಸಿ ವರ್ಗ ಬೋಧನೆಗೆ ಸಂಬಂಧಿಸಿದ ಬೋಧನೋಪಕರಣಗಳನ್ನು ತಯಾರಿಸಿಕೊಳ್ಳುವುದು [ವರ್ಕಿಂಗ್ ಮಾಡಲ್ಸ್]

*06.* ವಿವಿಧೋದ್ದೇಶಗಳಿಂದ ಕೂಡಿದ ವಿವಿಧ ಕೌಶಲ್ಯಗಳನ್ನೊಳಗೊಂಡ ಸಮಾಜೋಪಯೋಗಿ ವಸ್ತುಗಳನ್ನು ಪ್ರದರ್ಶನದಲ್ಲಿಡುವುದು.

07. ಜಿಲ್ಲಾ ಹಂತದಲ್ಲಿ ಒಟ್ಟಾರೆ ಭಾಗವಹಿಸಿದ ವೃತ್ತಿ ಶಿಕ್ಷಣದ ಎಲ್ಲಾ ವೃತ್ತಿಗಳಿಗೆ ಸಂಬಂಧಿಸಿದಂತೆ ಪ್ರಥಮ ಸ್ಥಾನ, ದ್ವಿತೀಯ ಸ್ಥಾನ ಹಾಗೂ ತೃತೀಯ ಸ್ಥಾನ ಪಡೆದ ಶಾಲೆಗಳಿಗೆ ಬಹುಮಾನ ನೀಡುವುದು ಹಾಗೂ ಭಾಗವಹಿಸಿದ ಮಕ್ಕಳಿಗೆ ಪ್ರಮಾಣ ಪತ್ರ ನೀಡಿ ಪ್ರೋತ್ಸಾಹಿಸುವುದು.
08. ಜಿಲ್ಲಾ ಮಟ್ಟದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ಶಾಲೆಗಳು ರಾಜ್ಯ ಮಟ್ಟದ ವಸ್ತು ಪ್ರದರ್ಶನಕ್ಕೆ ಕಡ್ಡಾಯವಾಗಿ ಹಾಜರಾಗಬೇಕು. ರಾಜ್ಯಮಟ್ಟದ ವಸ್ತುಪ್ರದರ್ಶನ ದಿನಾಂಕ ನಿಗದಿಗೊಳಿಸಿ ಮುಂದೆ ತಿಳಿಸಲಾಗುವುದು.
09. ವಸ್ತು ಪ್ರದರ್ಶನದಲ್ಲಿ ಭಾಗವಹಿಸುವ ವೃತ್ತಿ ಶಿಕ್ಷಕರಿಗೆ ಓ.ಓ.ಡಿ ಸೌಲಭ್ಯ ನೀಡಲು ಉಪನಿರ್ದೇಶಕರು [ಆಡಳಿತ] ಇವರು ಕ್ರಮ ಕೈಗೊಳ್ಳುವುದು.
10. ಜಿಲ್ಲಾ ಹಂತದಲ್ಲಿ ವಸ್ತು ಪ್ರದರ್ಶನಕ್ಕೆ ಹಾಜರಾಗುವ ತೋಟಗಾರಿಕೆ, ವ್ಯವಸಾಯ, ಹೊಲಿಗೆ, ರೇಷ್ಮೆ, ಬಡಗಿತನ, ಸಾಮಾಜಿಕ / ಉಪಯುಕ್ತ ಉತ್ಪಾದನಾ ಕಾರ್ಯ ಈ ವಿಷಯಗಳ ವೃತ್ತಿ ಶಿಕ್ಷಕರನ್ನು ಬಿಡುಗಡೆಗೊಳಿಸಿ, ವಸ್ತುಪ್ರದರ್ಶನಕ್ಕೆ ಹಾಜರಾಗುವಂತೆ ಕ್ರಮ ಕೈಗೊಳ್ಳಲು ಆಯಾ ಜಿಲ್ಲೆಗಳ ಉಪನಿರ್ದೇಶಕರು [ಆಡಳಿತ] ಮತ್ತು ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.
11. 2012-13ನೇ ಸಾಲಿನ ವೃತ್ತಿ ಶಿಕ್ಷಣ ಜಿಲ್ಲಾ ವಸ್ತು ಪ್ರದರ್ಶನದ ಪ್ರಕ್ರಿಯೆಯನ್ನು 2013ರ ಜನವರಿ ತಿಂಗಳೊಳಗಾಗಿ ಪೂರ್ಣಗೊಳಿಸಿ ವರದಿಯನ್ನು ಸಲ್ಲಿಸುವುದು.

2012-13ನೇ ಸಾಲಿನ ಜಿಲ್ಲಾ ಮಟ್ಟದ ವಸ್ತು ಪ್ರದರ್ಶನದ ಬಗ್ಗೆ ವೃತ್ತಿ ಶಿಕ್ಷಣ ವಿಷಯ ಪರಿವೀಕ್ಷಕರು, ಜಿಲ್ಲಾ ಉಪನಿರ್ದೇಶಕರು [ಆಡಳಿತ], ಇವರ ನಿರ್ದೇಶನದಂತೆ ಕಾರ್ಯ ನಿರ್ವಹಿಸುವುದು. ವೃತ್ತಿ ಶಿಕ್ಷಣ ವಿಷಯ ಪರಿವೀಕ್ಷಕರು ಇಲ್ಲದೇ ಇದ್ದಲ್ಲಿ, ಇತರೆ ವಿಷಯ ಪರಿವೀಕ್ಷಕರು ಕಾರ್ಯನಿರ್ವಹಿಸುವುದು.

ನಿರ್ದೇಶಕರು [ಪ್ರೌಢ ಶಿಕ್ಷಣ]

ಇವರಿಗೆ:

01. ಅಪರ ಆಯುಕ್ತರು, ಸಾ.ಶಿ.ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ.
02. ವಿಭಾಗೀಯ ಸಹನಿರ್ದೇಶಕರು, ಸಾ.ಶಿ.ಇಲಾಖೆ, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ ವಿಭಾಗ.
03. ರಾಜ್ಯದ ಎಲ್ಲಾ ಉಪನಿರ್ದೇಶಕರು [ಆಡಳಿತ[, ಇವರಿಗೆ ಸೂಕ್ತ ಕ್ರಮಕ್ಕಾಗಿ.
04. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
05. ಹಿರಿಯ ಸಹಾಯಕ ನಿರ್ದೇಶಕರು, ವೃತ್ತಿ ಶಿಕ್ಷಣ ಶಾಖೆ, ಸಾ.ಶಿ.ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.
06. ಎಲ್ಲಾ ಪ್ರೌಢಶಾಲಾ ಮುಖ್ಯಶಿಕ್ಷಕರಿಗೆ [ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ].
07. ಸಂಬಂಧಿಸಿದ ಜಿಲ್ಲಾ ವಿಷಯ ಪರಿವೀಕ್ಷಕರು [ವೃತ್ತಿ ಶಿಕ್ಷಣ].
08. ಕಛೇರಿ ಪ್ರತಿ.